



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ۝

1. ಹಾಮೀಮ್

حٰمٓ ۝١

2. ಐನ್ ಸೀನ್ ಕಾಫ್.

عٓسٓقٓ ۝٢

3. ಮಹಾಪ್ರಬಲನೂ ಮಹಾಯುಕ್ತಿವಂತನೂ ಆಗಿರುವ ಅಲ್ಲಾಹನು ನಿಮ್ಮ ಕಡೆಗೂ ನಿಮಗಿಂತ ಮುಂಚೆ ಗತಿಸಿ ಹೋದವರ (ಸಂದೇಶವಾಹಕರ) ಕಡೆಗೂ ಇದೇ ರೀತಿಯಲ್ಲಿ 'ದಿವ್ಯವಾಣಿ' ಕಳುಹಿಸುತ್ತಲಿದ್ದಾನೆ.[1]

كَذٰلِكَ يُوْحِيْٓ اِلَيْكَ وَاِلَى الَّذِيْنَ مِنْ قَبْلِكَ ۙ اللّٰهُ الْعَزِيْزُ الْحَكِيْمُ ۝٣

4. ಭೂಮಿ-ಆಕಾಶಗಳಲ್ಲಿ ಇರುವುದೆಲ್ಲವೂ ಅವನದೇ. ಅವನು ಪರಮೋನ್ನತನೂ ಮಹಾನನೂ ಆಗಿರುತ್ತಾನೆ.

لَهٗ مَا فِي السَّمٰوٰتِ وَمَا فِي الْاَرْضِ ۭ وَهُوَ الْعَلِيُّ الْعَظِيْمُ ۝٤

5. ಮೇಲ್ಭಾಗದಿಂದ ಆಕಾಶಗಳು ಸಿಡಿದು ಬೀಳುವುದರಲ್ಲಿದೆ.[2] ದೇವಚರರು ತಮ್ಮ ಪ್ರಭುವಿನ ಪ್ರಶಂಸೆಯೊಂದಿಗೆ ಕೀರ್ತನೆ ಮಾಡುತ್ತಿದ್ದಾರೆ ಮತ್ತು ಭೂವಾಸಿಗಳಿಗಾಗಿ ಕ್ಷಮಾಯಾಚನೆ ಮಾಡುತ್ತಿರುತ್ತಾರೆ. ತಿಳಿಯಿರಿ, ನಿಜಕ್ಕೂ ಅಲ್ಲಾಹನು ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

تَكَادُ السَّمٰوٰتُ يَتَفَطَّرْنَ مِنْ فَوْقِهِنَّ وَالْمَلٰۗىِٕكَةُ يُسَبِّحُوْنَ بِحَمْدِ رَبِّهِمْ وَيَسْتَغْفِرُوْنَ لِمَنْ فِي الْاَرْضِ ۭ اَلَآ اِنَّ اللّٰهَ هُوَ الْغَفُوْرُ الرَّحِيْمُ ۝٥

6. ಯಾರು ಅವನನ್ನು ಬಿಟ್ಟು ಇತರರನ್ನು ತಮ್ಮ ರಕ್ಷಕ[3]ರಾಗಿ

وَالَّذِيْنَ اتَّخَذُوْا مِنْ دُوْنِهٖٓ اَوْلِيَاۗءَ

1. ಅರ್ಥಾತ್- ಕುರ್‌ಆನಿನಲ್ಲಿ ವಿವರಿಸಲಾಗುತ್ತಿರುವುದನ್ನೇ ದೇವವಾಣಿಯ ಮೂಲಕ ಅಲ್ಲಾಹನು ಪ್ರವಾದಿವರ್ಯರ(ಸ) ಮೇಲೆ ಅವತೀರ್ಣಗೊಳಿಸಿದ್ದಾನೆ. ಹಿಂದಿನ ಪ್ರವಾದಿಗಳ ಮೇಲೂ ಅವನು ಅಂತಹ ವಿಷಯಗಳನ್ನೇ ಅವತೀರ್ಣಗೊಳಿಸಿದ್ದನು.
2. ಅರ್ಥಾತ್- ಅಲ್ಲಾಹನ ಜತೆಗೆ ದೇವತ್ವದಲ್ಲಿ ಯಾವುದಾದರೂ ಸೃಷ್ಟಿಯನ್ನು ಭಾಗೀದಾರರೆಂದು ತಿಳಿಯುವುದು ಸಾಮಾನ್ಯ ವಿಷಯವೇನೂ ಅಲ್ಲ. ಅದರಿಂದ ಆಕಾಶವೇ ಕಳಚಿ ಬಿದ್ದರೆ ಆಶ್ಚರ್ಯವಿಲ್ಲ. ಅದು ಅಂತಹ ಗಂಭೀರ ವಿಷಯ.
3. ಮೂಲದಲ್ಲಿ 'ಔಲಿಯಾ' ಎಂಬ ಪದ ಪ್ರಯೋಗವಾಗಿದೆ. ಅರಬಿ ಭಾಷೆಯಲ್ಲಿ ಅದಕ್ಕೆ ಬಹಳ ವಿಸ್ತಾರವಾದ ವ್ಯಾಖ್ಯೆ ಇದೆ. ಮಿಥ್ಯ

ಮಾಡಿಕೊಂಡಿರುವವರೋ ಅವರ ಮೇಲ್ವಿಚಾರಕನು ಅಲ್ಲಾಹನೇ ಆಗಿರುತ್ತಾನೆ. ನೀವು ಅವರ ಕಾವಲುಗಾರರಲ್ಲ.

اللّٰهُ حَفِيظٌ عَلَيْهِمْ ۖ وَمَا أَنْتَ
عَلَيْهِمْ بِوَكِيلٍ ⑥

7. ಸಂದೇಶವಾಹಕರೇ, ಇದೇ ರೀತಿಯಲ್ಲಿ ಈ ಅರಬೀ ಕುರ್‌ಆನನ್ನು ನಾವು ನಿಮ್ಮ ಕಡೆಗೆ 'ದಿವ್ಯವಾಣಿ' ಮಾಡಿರುತ್ತೇವೆ. (ಇದು) ನಾಡುಗಳ ಕೇಂದ್ರ (ಮಕ್ಕಾ ಪಟ್ಟಣ) ಹಾಗೂ ಅದರ ಸುತ್ತಮುತ್ತ ಇರುವವರನ್ನು ನೀವು ಎಚ್ಚರಿಸುವಂತಾಗಲು ಮತ್ತು ನಿಸ್ಸಂದೇಹವಾಗಿ ಬರಲಿರುವ, ಸಮಾವೇಶದ ದಿನದ ಬಗ್ಗೆ ಎಚ್ಚರಿಕೆ ನೀಡುವಂತಾಗಲು. ಒಂದು ಕೂಟವು ಸ್ವರ್ಗಕ್ಕೆ ಇನ್ನೊಂದು ಕೂಟವು ನರಕಕ್ಕೆ ಹೋಗಲಿಕ್ಕಿದೆ.

وَكَذٰلِكَ أَوْحَيْنَا إِلَيْكَ قُرْآنًا عَرَبِيًّا
لِتُنْذِرَ أُمَّ الْقُرٰى وَمَنْ حَوْلَهَا وَتُنْذِرَ
يَوْمَ الْجَمْعِ لَا رَيْبَ فِيهِ ۚ فَرِيقٌ فِي الْجَنَّةِ
وَفَرِيقٌ فِي السَّعِيرِ ⑦

8. ಅಲ್ಲಾಹನು ಇಚ್ಛಿಸುತ್ತಿದ್ದರೆ ಇವರೆಲ್ಲರನ್ನೂ ಒಂದೇ ಸಮುದಾಯವಾಗಿ ಮಾಡಿ ಬಿಡುತ್ತಿದ್ದನು. ಆದರೆ ಅವನು ತನಗೆ ಇಷ್ಟವಿದ್ದವರನ್ನು ತನ್ನ ಕೃಪೆಯೊಳಗೆ ಸೇರಿಸಿಕೊಳ್ಳುತ್ತಾನೆ ಮತ್ತು ಅಕ್ರಮಿಗಳಿಗೆ ರಕ್ಷಕ ಮಿತ್ರರಾಗಲಿ, ಸಹಾಯಕರಾಗಲಿ ಯಾರೂ ಇಲ್ಲ.

وَلَوْ شَاءَ اللّٰهُ لَجَعَلَهُمْ أُمَّةً وَاحِدَةً
وَلٰكِنْ يُدْخِلُ مَنْ يَشَاءُ فِي رَحْمَتِهِ ۚ
وَالظّٰلِمُونَ مَا لَهُمْ مِنْ وَلِيٍّ وَلَا نَصِيرٍ ⑧

9. ಇವರು ಅವನನ್ನು ಬಿಟ್ಟು ಇತರರನ್ನು ರಕ್ಷಕ ಮಿತ್ರರಾಗಿ ಮಾಡಿಕೊಳ್ಳುವ(ಷ್ಟು ಮೂರ್ಖ)ರೇ? ರಕ್ಷಕ ಮಿತ್ರನಂತೂ ಅಲ್ಲಾಹನೇ ಆಗಿದ್ದಾನೆ. ಅವನೇ ಮೃತರನ್ನು ಜೀವಂತಗೊಳಿಸುತ್ತಾನೆ ಮತ್ತು ಸಕಲ ವಿಷಯಗಳಿಗೂ ಸಾಮರ್ಥ್ಯವುಳ್ಳವನಾಗಿದ್ದಾನೆ.

أَمِ اتَّخَذُوا مِنْ دُونِهِ أَوْلِيَاءَ ۖ فَاللّٰهُ
هُوَ الْوَلِيُّ وَهُوَ يُحْيِي الْمَوْتٰى وَهُوَ
عَلٰى كُلِّ شَيْءٍ قَدِيرٌ ⑨

10. ನಿಮ್ಮೊಳಗೆ[4] ಯಾವ ವಿಷಯದಲ್ಲೇ ಮತಭೇದವುಂಟಾದರೂ ಅದರ ತೀರ್ಮಾನ ಮಾಡುವುದು ಅಲ್ಲಾಹನ ಕೆಲಸ. ಆ ಅಲ್ಲಾಹನೇ

وَمَا اخْتَلَفْتُمْ فِيهِ مِنْ شَيْءٍ فَحُكْمُهُ
إِلَى اللّٰهِ ۚ ذٰلِكُمُ اللّٰهُ رَبِّي عَلَيْهِ تَوَكَّلْتُ ۖ

ಆರಾಧ್ಯರುಗಳ ಕುರಿತು ಪಥಭ್ರಷ್ಟ ಜನರು ವಿಭಿನ್ನ ವಿಶ್ವಾಸ ಮತ್ತು ಧೋರಣೆಯನ್ನು ಹೊಂದಿದ್ದಾರೆ. ಅದನ್ನು ಪವಿತ್ರ ಕುರ್‌ಆನ್ 'ಅಲ್ಲಾಹನ ಹೊರತು ಇತರರನ್ನು ರಕ್ಷಕನನ್ನಾಗಿ ಮಾಡುವುದು' ಎಂದು ಕರೆದಿದೆ. ಕುರ್‌ಆನಿನ ಆಧಾರದಲ್ಲಿ ಈ ಕೆಳಗಿನವುಗಳನ್ನು ಮಾನವ ತನ್ನ ರಕ್ಷಕನನ್ನಾಗಿ ಮಾಡಿಕೊಂಡಂತಾಗುತ್ತದೆ. 1) ಯಾರ ಮಾತಿನಂತೆ ನಡೆಯುತ್ತಾನೋ, ಯಾರ ಮಾರ್ಗದರ್ಶನದಂತೆ ವರ್ತಿಸುತ್ತಾನೋ, ಯಾರು ಗೊತ್ತು ಪಡಿಸಿದ ವಿಧಾನ, ಸಂಪ್ರದಾಯ ಮತ್ತು ವಿಧಿಗಳನ್ನು ಪಾಲಿಸುತ್ತಾನೋ. 2) ಯಾರ ಮಾರ್ಗದರ್ಶನಗಳ ಬಗ್ಗೆ ವಿಶ್ವಾಸವಿರಿಸುತ್ತಾನೋ ಯಾರ ಕುರಿತು ಸರಿಯಾದ ದಾರಿ ತೋರುವವನು ಮತ್ತು ತಪ್ಪುದಾರಿಯಿಂದ ತಡೆಯುವವನು ಎಂದು ಭಾವಿಸುತ್ತಾನೋ. 3) ಯಾರ ಬಗ್ಗೆ ಲೋಕದಲ್ಲಿ ನಾನು ಏನೇ ಮಾಡುತ್ತಿದ್ದರೂ ಅದರ ಕೆಟ್ಟ ಪರಿಣಾಮದಿಂದ ರಕ್ಷಿಸುವವನು, ದೇವನಿದ್ದರೂ, ನಿರ್ಣಾಯಕ ದಿನ ಬರಲಿದ್ದರೂ ಅವನು ನನ್ನನ್ನು ಯಾತನೆಯಿಂದ ರಕ್ಷಿಸುವನು ಎಂದು ಭಾವಿಸುವನೋ 4) ಯಾರ ಬಗ್ಗೆ ಲೋಕದಲ್ಲಿ ಅಸಾಮಾನ್ಯ ರೀತಿಯಲ್ಲಿ ಸಹಾಯ ಮಾಡುವವನು, ವಿಪತ್ತು ಮತ್ತು ಸಂಕಷ್ಟಗಳಿಂದ ರಕ್ಷಿಸುವವನು, ಜೀವನಾಧಾರಗಳನ್ನು ಒದಗಿಸುವವನು, ಸಂತಾನ ಪ್ರದಾನ ಮಾಡುವವನು, ಇಷ್ಟಾರ್ಥ ಈಡೇರಿಸುವವನು ಮತ್ತು ಎಲ್ಲಾ ವಿಧದ ಬಯಕೆಗಳನ್ನು ಪೂರ್ತೀಕರಿಸುವವನು ಎಂದು ಕಲ್ಪಿಸುವನೋ.

4. ಇಲ್ಲಿಂದ 12ನೆಯ ಸೂಕ್ತದ ತನಕದ ಉದ್ಧರಣೆ ಅಲ್ಲಾಹನ ವಾಣಿಯಾಗಿದ್ದರೂ, ಇದರಲ್ಲಿ ಅಲ್ಲಾಹನು ಸಂಬೋಧನೆ ಮಾಡುವವನಲ್ಲ. ಬದಲಾಗಿ ಇದು ಪ್ರವಾದಿವರ್ಯರ(ಸ) ಸಂಬೋಧನೆಯಾಗಿದೆ. ನೀವು ಹೀಗೆ ಪ್ರಕಟಿಸಿರಿ ಎಂದು ಅಲ್ಲಾಹನು ತನ್ನ ಪ್ರವಾದಿಗೆ ಆದೇಶಿಸುತ್ತಿದ್ದಾನೆ. ಸೂರಃ ಫಾತಿಹಾ ಕೂಡ ಇಂತಹುದೇ ಒಂದು ಉದಾಹರಣೆಯಾಗಿದೆ. ಅದು ಅಲ್ಲಾಹನ ವಾಣಿಯೇ ಆಗಿದೆ. ಆದರೆ ದಾಸರು ಅದನ್ನು ಪ್ರಾರ್ಥನೆಯ ರೂಪದಲ್ಲಿ ಅಲ್ಲಾಹನ ಮುಂದಿಡುತ್ತಾರೆ.

ನನ್ನ ಪ್ರಭು. ನಾನು ಅವನ ಮೇಲೆಯೇ ಭರವಸೆಯನ್ನಿರಿಸಿದೆ ಮತ್ತು ಅವನ ಕಡೆಗೇ ನಾನು ಮರಳುತ್ತೇನೆ.

وَإِلَيْهِ أُنِيبُ ⑩

11. ಭೂಮಿ-ಆಕಾಶಗಳ ನಿರ್ಮಾಪಕ, ಅವನು ನಿಮ್ಮ ವರ್ಗದಿಂದಲೇ ನಿಮಗಾಗಿ ಜೊತೆಗಳನ್ನು ಸೃಷ್ಟಿಸಿದನು, ಹಾಗೆಯೇ ಪ್ರಾಣಿಗಳಲ್ಲೂ (ಅವುಗಳ ವರ್ಗದಿಂದಲೇ) ಜೋಡಿಗಳನ್ನು ಉಂಟು ಮಾಡಿದನು. ಈ ರೀತಿಯಲ್ಲಿ ಅವನು ನಿಮ್ಮ ಸಂತತಿಗಳನ್ನು ಹಬ್ಬಿಸುತ್ತಾನೆ. ವಿಶ್ವದ ಯಾವ ವಸ್ತುವೂ ಅವನನ್ನು ಹೋಲುವುದಿಲ್ಲ. ಅವನು ಎಲ್ಲವನ್ನು ಆಲಿಸುವವನೂ ವೀಕ್ಷಿಸುವವನೂ ಆಗಿದ್ದಾನೆ.

فَاطِرُ السَّمٰوٰتِ وَالْأَرْضِ ۚ جَعَلَ لَكُمْ
مِّنْ أَنفُسِكُمْ أَزْوَاجًا وَّمِنَ الْأَنْعَامِ
أَزْوَاجًا ۖ يَذْرَؤُكُمْ فِيهِ ۚ لَيْسَ كَمِثْلِهِ
شَيْءٌ ۖ وَهُوَ السَّمِيعُ الْبَصِيرُ ⑪

12. ಭೂಮಿ-ಆಕಾಶಗಳ ಭಂಡಾರಗಳ ಬೀಗದ ಕೈಗಳು ಅವನಲ್ಲೇ ಇವೆ. ತಾನಿಚ್ಛಿಸಿದವರಿಗೆ ಧಾರಾಳ ಜೀವನಾಧಾರ ನೀಡುತ್ತಾನೆ ಮತ್ತು ತಾನಿಚ್ಛಿಸಿದವರಿಗೆ ಪರಿಮಿತವಾಗಿ ಕೊಡುತ್ತಾನೆ. ಅವನಿಗೆ ಸಕಲ ವಿಷಯಗಳ ಜ್ಞಾನವಿದೆ.

لَهُ مَقَالِيدُ السَّمٰوٰتِ وَالْأَرْضِ ۖ يَبْسُطُ
الرِّزْقَ لِمَن يَشَاءُ وَيَقْدِرُ ۚ إِنَّهُ
بِكُلِّ شَيْءٍ عَلِيمٌ ⑫

13. ಅವನು ನೂಹರಿಗೆ ಆಜ್ಞಾಪಿಸಿದ್ದ ಧರ್ಮ ವಿಧಾನವನ್ನೇ ನಿಮಗಾಗಿಯೂ ನಿಶ್ಚಯಿಸಿ ಕೊಟ್ಟಿದ್ದಾನೆ ಮತ್ತು (ಮುಹಮ್ಮದರೇ) ಈಗ ನಾವು ಅದನ್ನೇ ದಿವ್ಯವಾಣಿಯ ಮೂಲಕ ನಿಮ್ಮ ಕಡೆಗೆ ಕಳುಹಿಸಿರುತ್ತೇವೆ. ಇದನ್ನೇ ನಾವು ಇಬ್‌ರಾಹೀಮ್, ಮೂಸಾ ಮತ್ತು ಈಸಾರಿಗೂ ಬೋಧಿಸಿದ್ದೆವು. ಈ ಧರ್ಮವನ್ನು ಸಂಸ್ಥಾಪಿಸಿರಿ ಮತ್ತು ಇದರಲ್ಲಿ ವಿಭಿನ್ನರಾಗದಿರಿ ಎಂಬ ಆದೇಶದೊಂದಿಗೆ. (ಸಂದೇಶವಾಹಕರೇ) ನೀವು ಕರೆ ನೀಡುತ್ತಿರುವ ಈ ವಿಷಯವು ಬಹುದೇವವಿಶ್ವಾಸಿಗಳಿಗೆ ಅತ್ಯಂತ ಅಸಹನೀಯವಾಗಿದೆ. ಅಲ್ಲಾಹನು ತಾನಿಚ್ಛಿಸುವವರನ್ನು ತನ್ನವರಾಗಿ ಮಾಡಿಕೊಳ್ಳುತ್ತಾನೆ ಮತ್ತು ತನ್ನತ್ತ ಮರಳುವವರಿಗೆ ಮಾತ್ರ ತನ್ನ ಕಡೆಗೆ ಬರುವ ಮಾರ್ಗವನ್ನು ತೋರಿಸಿಕೊಡುತ್ತಾನೆ.

شَرَعَ لَكُم مِّنَ الدِّينِ مَا وَصّٰى بِهِ
نُوحًا وَّالَّذِي أَوْحَيْنَا إِلَيْكَ وَمَا
وَصَّيْنَا بِهِ إِبْرٰهِيمَ وَمُوسٰى وَعِيسٰى
أَنْ أَقِيمُوا الدِّينَ وَلَا تَتَفَرَّقُوا فِيهِ ۚ
كَبُرَ عَلَى الْمُشْرِكِينَ مَا تَدْعُوهُمْ إِلَيْهِ ۚ
اللّٰهُ يَجْتَبِي إِلَيْهِ مَن يَشَاءُ وَيَهْدِي
إِلَيْهِ مَن يُنِيبُ ⑬

14. ಜನರಲ್ಲಿ ಭಿನ್ನತೆ ಕಂಡು ಬಂದುದು ಅವರ ಬಳಿಗೆ ಜ್ಞಾನ ಬಂದ ಬಳಿಕವಾಗಿತ್ತು. ಅವರು ಪರಸ್ಪರರ ಮೇಲೆ ಅತಿರೇಕವೆಸಗಲು ಬಯಸಿದುದರಿಂದಲೇ ಹೀಗಾಯಿತು. ಒಂದು ನಿಶ್ಚಿತ ಸಮಯದ ವರೆಗೆ ತೀರ್ಪನ್ನು ಮುಂದೂಡಲಾಗುವುದೆಂದು ನಿಮ್ಮ ಪ್ರಭು ಮೊದಲೇ ಹೇಳದಿರುತ್ತಿದ್ದರೆ ಅವರೊಳಗೆ ತೀರ್ಮಾನ ಮಾಡಿ ಬಿಡಲಾಗುತ್ತಿತ್ತು. ವಾಸ್ತವದಲ್ಲಿ ಮುಂಚಿನವರ ಬಳಿಕ ಗ್ರಂಥದ

وَمَا تَفَرَّقُوا إِلَّا مِن بَعْدِ مَا جَاءَهُمُ
الْعِلْمُ بَغْيًا بَيْنَهُمْ ۚ وَلَوْلَا كَلِمَةٌ
سَبَقَتْ مِن رَّبِّكَ إِلٰى أَجَلٍ مُّسَمًّى
لَّقُضِيَ بَيْنَهُمْ ۚ وَإِنَّ الَّذِينَ أُورِثُوا
الْكِتٰبَ مِن بَعْدِهِمْ لَفِي شَكٍّ

ವಾರೀಸುದಾರರಾಗಿ ಮಾಡಲ್ಪಟ್ಟವರು ಅದರ ಕುರಿತು ಕಳವಳಕಾರಿ ಅನುಮಾನದಲ್ಲಿ ಬಿದ್ದಿರುತ್ತಾರೆ.[5]

مِّنْهُ مُرِيبٍ ﴿١٤﴾

15. (ಈ ಪರಿಸ್ಥಿತಿ ಉಂಟಾಗಿ ಬಿಟ್ಟಿದೆ) ಆದುದರಿಂದ ಸಂದೇಶ ವಾಹಕರೇ ನೀವಿನ್ನು ಅದೇ ಧರ್ಮದ ಕಡೆಗೆ ಕರೆ ನೀಡಿರಿ ಮತ್ತು ನಿಮಗೆ ಆಜ್ಞಾಪಿಸಲಾಗಿರುವ ಪ್ರಕಾರ ಅದರಲ್ಲೇ ಸ್ಥಿರವಾಗಿರಿ. ಇವರ ಇಚ್ಛೆಗಳನ್ನು ಅನುಸರಿಸಬೇಡಿರಿ ಮತ್ತು ಇವರೊಡನೆ (ಹೀಗೆ) ಹೇಳಿರಿ- "ಅಲ್ಲಾಹನು ಅವತೀರ್ಣಗೊಳಿಸಿದ ಪ್ರತಿಯೊಂದು ಗ್ರಂಥದ ಮೇಲೆ ನಾನು ವಿಶ್ವಾಸವಿರಿಸಿದೆನು. ನಿಮ್ಮ ನಡುವೆ ನ್ಯಾಯ ಪಾಲಿಸಬೇಕೆಂದು ನನಗೆ ಆದೇಶಿಸಲಾಗಿದೆ. ಅಲ್ಲಾಹನೇ ನಮ್ಮ ಪ್ರಭುವೂ ನಿಮ್ಮ ಪ್ರಭುವೂ ಆಗಿರುತ್ತಾನೆ. ನಮ್ಮ ಕರ್ಮಗಳು ನಮಗೆ, ನಿಮ್ಮ ಕರ್ಮಗಳು ನಿಮಗೆ. ನಮ್ಮ ನಿಮ್ಮೊಳಗೆ ಯಾವ ಕಲಹವೂ ಇಲ್ಲ.[6] ಅಲ್ಲಾಹನು ಒಂದು ದಿನ ನಮ್ಮೆಲ್ಲರನ್ನು ಒಟ್ಟುಗೂಡಿಸುವನು ಮತ್ತು ಎಲ್ಲರಿಗೂ ಅವನ ಕಡೆಗೇ ಮರಳಲಿಕ್ಕಿದೆ."

فَلِذَٰلِكَ فَادْعُ ۚ وَاسْتَقِمْ كَمَا أُمِرْتَ ۚ
وَلَا تَتَّبِعْ أَهْوَاءَهُمْ ۚ وَقُلْ آمَنتُ
بِمَا أَنزَلَ اللَّهُ مِن كِتَابٍ ۖ وَأُمِرْتُ
لِأَعْدِلَ بَيْنَكُمُ ۖ اللَّهُ رَبُّنَا وَرَبُّكُمْ ۖ
لَنَا أَعْمَالُنَا وَلَكُمْ أَعْمَالُكُمْ ۖ لَا حُجَّةَ
بَيْنَنَا وَبَيْنَكُمُ ۖ اللَّهُ يَجْمَعُ بَيْنَنَا ۖ
وَإِلَيْهِ الْمَصِيرُ ﴿١٥﴾

16. ಅಲ್ಲಾಹನ ಕರೆಯು ಸ್ವೀಕರಿಸಲ್ಪಟ್ಟ ಬಳಿಕ (ಅದನ್ನು ಸ್ವೀಕರಿಸಿದವರೊಂದಿಗೆ) ಯಾರು ಅಲ್ಲಾಹನ ವಿಷಯದಲ್ಲಿ ಜಗಳಾಡುತ್ತಾರೋ ಅವರ ತರ್ಕವು ಅವರ ಪ್ರಭುವಿನ ದೃಷ್ಟಿಯಲ್ಲಿ ನಿರರ್ಥಕವಾಗಿದೆ. ಅವರ ಮೇಲೆ ಅವನ ಪ್ರಕೋಪವಿದೆ ಮತ್ತು ಅವರಿಗೆ ಘೋರ ಯಾತನೆ ಇದೆ.

وَالَّذِينَ يُحَاجُّونَ فِي اللَّهِ مِن بَعْدِ
مَا اسْتُجِيبَ لَهُ حُجَّتُهُمْ دَاحِضَةٌ
عِندَ رَبِّهِمْ وَعَلَيْهِمْ غَضَبٌ وَلَهُمْ
عَذَابٌ شَدِيدٌ ﴿١٦﴾

17. ಈ ಗ್ರಂಥವನ್ನೂ ನ್ಯಾಯ ತಕ್ಕಡಿಯನ್ನೂ ಸತ್ಯದೊಂದಿಗೆ ಇಳಿಸಿದವನು ಅಲ್ಲಾಹನೇ.[7] ನಿಮಗೇನು ಗೊತ್ತು? ತೀರ್ಮಾನದ ಘಳಿಗೆಯು ಹತ್ತಿರವೇ ಬಂದಿರಲೂಬಹುದು.

اللَّهُ الَّذِي أَنزَلَ الْكِتَابَ بِالْحَقِّ
وَالْمِيزَانَ ۗ وَمَا يُدْرِيكَ لَعَلَّ
السَّاعَةَ قَرِيبٌ ﴿١٧﴾

18. ಅದರ ಆಗಮನದ ಮೇಲೆ ನಂಬಿಕೆಯಿಲ್ಲದವರು ಅದಕ್ಕಾಗಿ ಅವಸರ ಪಡುತ್ತಿದ್ದಾರೆ. ಆದರೆ ಅದರ ಮೇಲೆ ನಂಬಿಕೆಯುಳ್ಳವರು ಅದನ್ನು ಭಯಪಡುತ್ತಾರೆ ಮತ್ತು ಅದು ಖಂಡಿತ ಬರಲಿದೆ ಎಂಬುದನ್ನು ಅರಿತಿದ್ದಾರೆ. ಆ ಘಳಿಗೆಯ ಆಗಮನದ ವಿಷಯದಲ್ಲಿ

يَسْتَعْجِلُ بِهَا الَّذِينَ لَا يُؤْمِنُونَ بِهَا ۖ
وَالَّذِينَ آمَنُوا مُشْفِقُونَ مِنْهَا وَ
يَعْلَمُونَ أَنَّهَا الْحَقُّ ۗ أَلَا إِنَّ الَّذِينَ

5. ಅರ್ಥಾತ್- ನಂತರದ ಜನಾಂಗಗಳಿಗೆ ತಮ್ಮ ಬಳಿಗೆ ತಲಪಿರುವ ಗ್ರಂಥಗಳು ಎಷ್ಟರ ಮಟ್ಟಿಗೆ ನಿಜಸ್ವರೂಪದಲ್ಲಿವೆ ಮತ್ತು ಎಷ್ಟರ ಮಟ್ಟಿಗೆ ಕಲಸುಮೇಲೋಗರಗೊಂಡಿವೆ ಎಂಬ ಸಂತೃಪ್ತಿ ಇರಲಿಲ್ಲ. ತಮ್ಮ ಪ್ರವಾದಿಗಳು ಯಾವ ಬೋಧನೆಗಳನ್ನು ತಂದಿದ್ದರು ಎಂದೂ ಅವರಿಗೆ ನಿಖರವಾಗಿ ತಿಳಿದಿರಲಿಲ್ಲ. ಅವರಲ್ಲಿರುವುದೆಲ್ಲವೂ ಸಂಶಯಾಸ್ಪದವಾಗಿದ್ದು ಅವು ಮನಸ್ಸಿನಲ್ಲಿ ಗೊಂದಲ ಮೂಡಿಸುತ್ತಿತ್ತು.

6. ಅರ್ಥಾತ್- ನ್ಯಾಯೋಚಿತವಾದ ಸಾಕ್ಷ್ಯಾಧಾರಗಳ ಸಹಿತ ವಿಷಯವನ್ನು ಸಾದರಪಡಿಸುವ ನಮ್ಮ ಕರ್ತವ್ಯವನ್ನು ನಾವು ಈಡೇರಿಸಿದೆವು. ಈಗ ವೃಥಾ ಜಗಳಾಡುವುದರಿಂದೇನು ಪ್ರಯೋಜನ. ನೀವು ಒಂದು ವೇಳೆ ಜಗಳಾಡಿದರೂ ನಾವು ನಿಮ್ಮೊಡನೆ ಜಗಳಾಡಲು ಸಿದ್ಧರಿಲ್ಲ.

يُمَارُونَ فِي السَّاعَةِ لَفِي ضَلَالٍ بَعِيدٍ ﴿١٨﴾

ಸಂಶಯಾತ್ಮಕ ಚರ್ಚೆಗಳನ್ನು ನಡೆಸುವವರು ಪಥಭ್ರಷ್ಟತೆಯಲ್ಲಿ ಬಹುದೂರ ಸಾಗಿ ಬಿಟ್ಟಿದ್ದಾರೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಿರಿ.

اللَّهُ لَطِيفٌ بِعِبَادِهِ يَرْزُقُ مَن يَشَاءُ ۖ وَهُوَ الْقَوِيُّ الْعَزِيزُ ﴿١٩﴾

19. ಅಲ್ಲಾಹನು ತನ್ನ ದಾಸರ ಮೇಲೆ ಅತ್ಯಂತ ಕರುಣೆಯುಳ್ಳವನು. ತಾನಿಚ್ಛಿಸಿದ್ದನ್ನು ತಾನಿಚ್ಛಿಸಿದವರಿಗೆ ದಯಪಾಲಿಸುತ್ತಾನೆ. ಅವನು ಮಹಾಬಲಿಷ್ಠನೂ ಪ್ರಬಲನೂ ಆಗಿರುತ್ತಾನೆ.

مَن كَانَ يُرِيدُ حَرْثَ الْآخِرَةِ نَزِدْ لَهُ فِي حَرْثِهِ ۖ وَمَن كَانَ يُرِيدُ حَرْثَ الدُّنْيَا نُؤْتِهِ مِنْهَا وَمَا لَهُ فِي الْآخِرَةِ مِن نَّصِيبٍ ﴿٢٠﴾

20. ಯಾರು ಪರಲೋಕದ ಬೆಳೆಯನ್ನು ಬಯಸುತ್ತಾನೋ ಅವನ ಬೆಳೆಯನ್ನು ನಾವು ವೃದ್ಧಿಸುತ್ತೇವೆ ಮತ್ತು ಯಾರು ಈ ಲೋಕದ ಬೆಳೆಯನ್ನು ಬಯಸುತ್ತಾನೋ ಅವನಿಗೆ ನಾವು ಈ ಲೋಕದಿಂದಲೇ ಕೊಟ್ಟು ಬಿಡುತ್ತೇವೆ. ಆದರೆ ಪರಲೋಕದಲ್ಲಿ ಅವನಿಗೆ ಯಾವ ಪಾಲೂ ಇಲ್ಲ.

أَمْ لَهُمْ شُرَكَاءُ شَرَعُوا لَهُم مِّنَ الدِّينِ مَا لَمْ يَأْذَن بِهِ اللَّهُ ۚ وَلَوْلَا كَلِمَةُ الْفَصْلِ لَقُضِيَ بَيْنَهُمْ ۗ وَإِنَّ الظَّالِمِينَ لَهُمْ عَذَابٌ أَلِيمٌ ﴿٢١﴾

21. ಇವರ ಬಳಿ, ಇವರಿಗಾಗಿ ಧರ್ಮದ ಸ್ವರೂಪದಲ್ಲಿರುವ ಮತ್ತು ಅಲ್ಲಾಹನು ಅನುಮತಿಸಿಲ್ಲದ ಜೀವನ ವಿಧಾನವೊಂದನ್ನು ನಿಶ್ಚಯಿಸಿಕೊಟ್ಟಂತಹ ದೇವಸಹಭಾಗಿಗಳು ಇದ್ದಾರೆಯೇ?[8] ತೀರ್ಮಾನದ ಮಾತು ಮೊದಲೇ ನಿಶ್ಚಿತವಾಗಿಲ್ಲದಿರುತ್ತಿದ್ದರೆ ಇವರ ಮಧ್ಯೆ ಈಗಾಗಲೇ ತೀರ್ಮಾನ ಮಾಡಿ ಬಿಡಲಾಗುತ್ತಿತ್ತು. ನಿಶ್ಚಯವಾಗಿಯೂ ಈ ಅಕ್ರಮಿಗಳಿಗೆ ವೇದನಾಯುಕ್ತ ಯಾತನೆ ಯಿದೆ.

تَرَى الظَّالِمِينَ مُشْفِقِينَ مِمَّا كَسَبُوا وَهُوَ وَاقِعٌ بِهِمْ ۗ وَالَّذِينَ آمَنُوا وَعَمِلُوا الصَّالِحَاتِ فِي رَوْضَاتِ الْجَنَّاتِ ۖ لَهُم مَّا يَشَاءُونَ عِندَ رَبِّهِمْ ۚ ذَٰلِكَ هُوَ الْفَضْلُ الْكَبِيرُ ﴿٢٢﴾

22. ಆಗ ಈ ಅಕ್ರಮಿಗಳು ತಮ್ಮ ಕರ್ಮಗಳ ಪರಿಣಾಮದಿಂದ ಭೀತರಾಗುತ್ತಿರುವುದನ್ನು ನೀವು ಕಾಣುವಿರಿ ಮತ್ತು ಅದು ಅವರ ಮೇಲೆ ಬಂದೇ ತೀರುವುದು. ಇದಕ್ಕೆ ವ್ಯತಿರಿಕ್ತವಾಗಿ ಸತ್ಯವಿಶ್ವಾಸ ಸ್ವೀಕರಿಸಿದವರು ಹಾಗೂ ಸತ್ಕರ್ಮವೆಸಗಿದವರು ಸ್ವರ್ಗೋದ್ಯಾನ ಗಳಲ್ಲಿರುವರು. ಅವರು ಬಯಸಿದುದನ್ನೆಲ್ಲ ತಮ್ಮ ಪ್ರಭುವಿನ ಬಳಿ ಪಡೆಯುವರು. ಇದುವೇ ಮಹಾ ಅನುಗ್ರಹವಾಗಿದೆ.

7. 'ಮೀಝಾನ್' (ತಕ್ಕಡಿ) ಎಂದರೆ ಸತ್ಯ-ಮಿಥ್ಯ, ಸರಿ-ತಪ್ಪು, ನ್ಯಾಯ-ಅನ್ಯಾಯ ಮತ್ತು ಹಿತ-ಅಹಿತಗಳ ನಡುವಿನ ವ್ಯತ್ಯಾಸವನ್ನು ತಕ್ಕಡಿಯಂತೆ ಅಳೆದು ತಿಳಿಸುವ ಅಲ್ಲಾಹನ ಶರೀಅತ್ ಆಗಿದೆ.

8. ಈ ಸೂಕ್ತದಲ್ಲಿ 'ಸಹಭಾಗಿಗಳು'(ಶುರಕಾ) ಎಂದು ಹೇಳಲಾಗಿರುವುದು ಜನರು ಪ್ರಾರ್ಥಿಸುವ, ಹರಕೆಗಳನ್ನೊಪ್ಪಿಸುವ ಮತ್ತು ಪೂಜಾವಿಧಿಗಳನ್ನು ನೆರವೇರಿಸುವ ಸಹಭಾಗಿಗಳ ಕುರಿತಲ್ಲ ಎಂಬುದು ವ್ಯಕ್ತ. ಯಾರನ್ನು ಜನರು ಆಜ್ಞಾಧಿಕಾರಿ ಎಂದು ಭಾವಿಸಿದ್ದಾರೋ ಯಾರ ವಿಚಾರ, ಸಿದ್ಧಾಂತ ಮತ್ತು ತತ್ವಗಳ ಮೇಲೆ ವಿಶ್ವಾಸವಿರಿಸುತ್ತಾರೋ ಯಾರ ನೈತಿಕ ನಿಯಮಗಳು ಹಾಗೂ ನಾಗರಿಕತೆ ಮತ್ತು ಸಂಸ್ಕೃತಿಯ ಮಾನದಂಡಗಳನ್ನು ಅಂಗೀಕರಿಸುತ್ತಾರೋ ಯಾರು ಗೊತ್ತುಪಡಿಸಿದ ನಿಯಮಗಳನ್ನು ತಮ್ಮ ಧಾರ್ಮಿಕ ಸಂಪ್ರದಾಯ-ಆರಾಧನೆಗಳಲ್ಲಿ ತಮ್ಮ ವೈಯಕ್ತಿಕ ಜೀವನದಲ್ಲಿ, ಸಾಮಾಜಿಕ ರಂಗದಲ್ಲಿ, ಸಂಸ್ಕೃತಿಯಲ್ಲಿ, ವ್ಯಾಪಾರ-ವಹಿವಾಟುಗಳಲ್ಲಿ, ತಮ್ಮ ರಾಜಕೀಯ ಮತ್ತು ಆಡಳಿತ ನಿರ್ವಹಣೆಯಲ್ಲಿ- ಇದುವೇ ಶರೀಅತ್ ಆಗಿದೆಯೇ ಎಂಬಂತೆ ಅಂಗೀಕರಿಸುತ್ತಾರೋ ಅವರನ್ನೇ ಇಲ್ಲಿ ಸಹಭಾಗಿಗಳು ಎಂದು ಕರೆಯಲಾಗಿದೆ.

23. ಸತ್ಯವಿಶ್ವಾಸವನ್ನು ಸ್ವೀಕರಿಸಿ ಸತ್ಕರ್ಮವೆಸಗಿದಂತಹ ತನ್ನ ದಾಸರಿಗೆ ಅಲ್ಲಾಹನು ನೀಡುತ್ತಿರುವ ಸುವಾರ್ತೆಯು ಇದುವೇ ಆಗಿದೆ. ಸಂದೇಶವಾಹಕರೇ! ಇವರೊಡನೆ (ಹೀಗೆ) ಹೇಳಿ ಬಿಡಿರಿ- "ನಾನು ಈ ಕಾರ್ಯಕ್ಕಾಗಿ ನಿಮ್ಮಿಂದ ಯಾವುದೇ ಪ್ರತಿಫಲವನ್ನು ಅಪೇಕ್ಷಿಸುತ್ತಿಲ್ಲ. ಆದರೆ ಬಾಂಧವ್ಯದ ಪ್ರೀತಿಯನ್ನು ಖಂಡಿತ ಅಪೇಕ್ಷಿಸುತ್ತೇನೆ."[9] ಒಳಿತನ್ನು ಗಳಿಸುವವನಿಗೆ ನಾವು ಆ ಒಳಿತಿನಲ್ಲಿ ಉತ್ತಮವಾಗಿ ವರ್ಧಿಸಿ ಕೊಡುವೆವು. ನಿಸ್ಸಂದೇಹವಾಗಿಯೂ ಅಲ್ಲಾಹನು ಮಹಾ ಕ್ಷಮಾಶೀಲನೂ ಗುಣಗ್ರಾಹಿಯೂ ಆಗಿರುತ್ತಾನೆ.

ذٰلِكَ الَّذِیْ یُبَشِّرُ اللّٰهُ عِبَادَهُ الَّذِیْنَ اٰمَنُوْا وَعَمِلُوا الصّٰلِحٰتِ ؕ قُلْ لَّاۤ اَسْـَٔلُكُمْ عَلَیْهِ اَجْرًا اِلَّا الْمَوَدَّةَ فِی الْقُرْبٰی ؕ وَمَنْ یَّقْتَرِفْ حَسَنَةً نَّزِدْ لَهٗ فِیْهَا حُسْنًا ؕ اِنَّ اللّٰهَ غَفُوْرٌ شَكُوْرٌ ﴿۲۳﴾

24. ಈ ವ್ಯಕ್ತಿಯು ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸಿರುವನೆಂದು ಇವರು ಹೇಳುತ್ತಾರೆಯೇ? ಅಲ್ಲಾಹನು ಇಚ್ಛಿಸಿದರೆ ನಿಮ್ಮ ಹೃದಯಕ್ಕೆ ಮುದ್ರೆಯೊತ್ತಿ ಬಿಡಬಹುದಾಗಿತ್ತು.[10] ಅವನು ಮಿಥ್ಯವನ್ನು ಅಳಿಸಿ ಬಿಡುತ್ತಾನೆ ಮತ್ತು ತನ್ನ ವಚನಗಳ

اَمْ یَقُوْلُوْنَ افْتَرٰی عَلَی اللّٰهِ كَذِبًا ۚ فَاِنْ یَّشَاِ اللّٰهُ یَخْتِمْ عَلٰی قَلْبِكَ ؕ وَیَمْحُ اللّٰهُ الْبَاطِلَ وَیُحِقُّ الْحَقَّ بِكَلِمٰتِهٖ ؕ

9. ಈ ಸೂಕ್ತವನ್ನು ಮೂರು ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ: 1) ನಾನು ಈ ಕೆಲಸಕ್ಕಾಗಿ ನಿಮ್ಮಿಂದ ಯಾವುದೇ ಪ್ರತಿಫಲ ನಿರೀಕ್ಷಿಸುವುದಿಲ್ಲ. ಆದರೆ ನೀವು (ಕುರೈಶರು) ನಿಮ್ಮ ಮತ್ತು ನನ್ನ ನಡುವೆ ಇರುವ ಕುಟುಂಬ ಸಂಬಂಧವನ್ನಾದರೂ ಕನಿಷ್ಠಪಕ್ಷ ಗಮನದಲ್ಲಿರಿಸಬೇಕು. ನೀವೇ ನನ್ನ ಶತ್ರುತ್ವಕ್ಕೆ ಅಣಿಯಾಗುವುದೆಂದರೆ ಎಂತಹ ಅನ್ಯಾಯ. 2) ನಿಮ್ಮಲ್ಲಿ ಅಲ್ಲಾಹನ ಸಾಮಿಪ್ಯದ ಬಯಕೆಯುಂಟಾಗಬೇಕೆಂಬುದನ್ನು ಬಿಟ್ಟರೆ ಬೇರಾವುದೇ ಪ್ರತಿಫಲವನ್ನು ನಾನು ಈ ಕೆಲಸಕ್ಕಾಗಿ ನಿಮ್ಮಿಂದ ನಿರೀಕ್ಷಿಸುವುದಿಲ್ಲ. 3) ಮೂರನೆಯ ವಿಧದ ವ್ಯಾಖ್ಯಾನ ನೀಡಿರುವ ವ್ಯಾಖ್ಯಾನಕಾರರಲ್ಲಿ ಕೆಲವರ ಪ್ರಕಾರ 'ಅಕಾರಿಬ್' ಎಂದರೆ ಅಬ್ದುಲ್ ಮುತ್ತಲಿಬ್‌ರ ಸಮಸ್ತ ಸಂತತಿಯಾಗಿದೆ. ಮತ್ತೆ ಕೆಲವರು ಅದನ್ನು ಹ. ಅಲೀ ಫಾತಿಮ(ರ) ಮತ್ತು ಅವರ ಸಂತಾನಕ್ಕೆ ಸೀಮಿತಗೊಳಿಸುತ್ತಾರೆ. ಆದರೆ ವಿಭಿನ್ನ ಕಾರಣಗಳಿಂದ ಈ ವ್ಯಾಖ್ಯಾನವನ್ನು ಸೂಕ್ತವೆಂದು ಹೇಳುವಂತಿಲ್ಲ. ಮೊದಲನೆಯದಾಗಿ ಪವಿತ್ರ ಮಕ್ಕಾ ನಗರದಲ್ಲಿ ಅಶ್ಶೂರಾ ಅಧ್ಯಾಯ ಅವತೀರ್ಣಗೊಂಡಾಗ ಹ.ಅಲೀ ಮತ್ತು ಫಾತಿಮಾರ(ರ) ವಿವಾಹವಾಗಿರಲಿಲ್ಲ. ಆದ್ದರಿಂದ ಅವರಿಗೆ ಸಂತಾನವಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ, ಅಲ್ಲದೆ ಅಬ್ದುಲ್ ಮುತ್ತಲಿಬ್‌ರ ಸಂತತಿಯಲ್ಲಿ ಎಲ್ಲರೂ ಪ್ರವಾದಿವರ್ಯರಿಗೆ(ಸ) ನೆರವಾಗುತ್ತಿರಲಿಲ್ಲ. ಕೆಲವರು ಬಹಿರಂಗವಾಗಿಯೇ ಶತ್ರುಗಳಿಗೆ ನೆರವಾಗುತ್ತಿದ್ದರು. ಅಬೂಲಹಬ್‌ನ ಶತ್ರುತ್ವ ಸರ್ವವಿಧಿತ. ಪ್ರವಾದಿವರ್ಯರ(ಸ) ಕುಟುಂಬಸ್ಥರು ಅಬ್ದುಲ್ ಮುತ್ತಲಿಬ್‌ರ ಸಂತಾನ ಮಾತ್ರವಾಗಿರಲಿಲ್ಲ. ಅವರ ತಾಯಿ, ಅವರ ತಂದೆ, ಅವರ ಪತ್ನಿಯಾದ ಹ.ಖದೀಜಾರಿಂದಾಗಿ(ರ) ಕುರೈಶರ ಎಲ್ಲಾ ಮನೆತನದಲ್ಲಿ ಅವರ ಕುಟುಂಬ ಸಂಬಂಧವಿತ್ತು. ಈ ಎಲ್ಲಾ ಮನೆತನಗಳಲ್ಲಿ ಅವರ ಮಹಾ ಬೆಂಬಲಿಗರೂ ಇದ್ದರು, ಹಾಗೆಯೇ ಕಡು ವೈರಿಗಳೂ ಇದ್ದರು. ಈ ನಿಟ್ಟಿನಲ್ಲಿ ಅತ್ಯಂತ ಪ್ರಮುಖವಾದ ಇನ್ನೊಂದು ವಿಷಯವೂ ಇದೆ. ಪ್ರವಾದಿವರ್ಯರು(ಸ) ಯಾವ ಉನ್ನತ ಸ್ಥಾನದಲ್ಲಿ ನಿಂತುಕೊಂಡು ಅಲ್ಲಾಹನೆಡೆಗೆ ಕರೆಯುತ್ತಾರೋ ಆ ಉನ್ನತ ಸ್ಥಾನದಿಂದ ತಮ್ಮ ಮಹತ್ಕಾರ್ಯಕ್ಕೆ ಪ್ರತಿಯಾಗಿ ತಮ್ಮ ಕುಟುಂಬಸ್ಥರನ್ನು ಪ್ರೀತಿಸುವಂತೆ ಕೋರುವುದು ಅತ್ಯಂತ ಕುತ್ಸಿತ ವಿಷಯವಾಗಿದೆ. ಅಲ್ಲಾಹನು ತನ್ನ ಪ್ರವಾದಿಗೆ ಇಂತಹ ಮಾತು ಕಲಿಸಿರಬಹುದು ಮತ್ತು ಪ್ರವಾದಿ ಕುರೈಶರ ಮುಂದೆ ನಿಂತುಕೊಂಡು ಈ ಮಾತು ಹೇಳಿರಬಹುದು ಎಂದು ಸತ್‌ಸ್ವಭಾವದ ಯಾವ ವ್ಯಕ್ತಿಯೂ ಕಲ್ಪಿಸಲಾರ. ಅಲ್ಲದೆ ಈ ಮಾತಿನ ಸಂಬೋಧಿತರು ಸತ್ಯವಿಶ್ವಾಸಿಗಳಲ್ಲ, ಸತ್ಯನಿಷೇಧಿಗಳಾಗಿದ್ದಾರೆ. ಅವರನ್ನು ಸಂಬೋಧಿಸಿಯೇ ಈ ಉಪನ್ಯಾಸ ಮಾಡಲಾಗಿದೆ. ಮುಂದೆಯೂ ಅವರನ್ನೇ ಸಂಬೋಧಿಸಲಾಗಿದೆ. ಆದ್ದರಿಂದ ಇದು ಇನ್ನಷ್ಟು ಅಸಂಬದ್ಧವಾಗಿ ಕಂಡು ಬರುತ್ತದೆ. ಈ ವಾಕ್ಸರಣಿಯಲ್ಲಿ ವಿರೋಧಿಗಳಿಂದ ಯಾವುದೇ ರೀತಿಯ ಪ್ರತಿಫಲವನ್ನು ನಿರೀಕ್ಷಿಸುವ ಔಚಿತ್ಯವಾದರೂ ಏನಿದೆ? ತಮಗಾಗಿ ಮಾಡಲಾಗುತ್ತಿರುವ ಕೆಲಸದ ಬಗ್ಗೆ ಕಿಂಚಿತ್ತಾದರೂ ಬೆಲೆ ಕಲ್ಪಿಸುವವರೊಡನೆ ಮಾತ್ರ ಪ್ರತಿಫಲವನ್ನು ನಿರೀಕ್ಷಿಸಲು ಸಾಧ್ಯ.

10. ಅರ್ಥಾತ್- ಓ ಪ್ರವಾದಿಯೇ! ಅವರು ನಿಮ್ಮನ್ನೂ ಅವರ ಮಟ್ಟದ ವ್ಯಕ್ತಿಯೆಂದು ಭಾವಿಸುತ್ತಾರೆ. ಇವರು ತಮ್ಮ ಸ್ವಾರ್ಥಕ್ಕಾಗಿ ದೊಡ್ಡ ದೊಡ್ಡ ಸುಳ್ಳನ್ನು ಹೇಳಿಬಿಡುವಂತೆ ನೀವೂ ಸ್ವಾರ್ಥ ಸಾಧನೆಗಾಗಿ ಸುಳ್ಳು ಹೇಳುತ್ತಿರಬಹುದೆಂದು ಕಲ್ಪಿಸುತ್ತಾರೆ. ಅವರ ಹೃದಯಗಳಿಗೆ ಮುದ್ರೆಯೊತ್ತಿರುವಂತೆ ನಿಮ್ಮ ಹೃದಯಕ್ಕೆ ಮುದ್ರೆಯೊತ್ತದೆ ಇರುವುದು ಅಲ್ಲಾಹನ ಅನುಗ್ರಹವಾಗಿದೆ.

ಮೂಲಕ ಸತ್ಯವನ್ನು ಸತ್ಯವೆಂದು ಸಾಧಿಸಿ ತೋರಿಸುತ್ತಾನೆ. ನಿಶ್ಚಯವಾಗಿಯೂ ಅವನು ಹೃದಯಗಳಲ್ಲಿ ಅಡಗಿರುವ ರಹಸ್ಯ ಗಳನ್ನು ಬಲ್ಲನು.

إِنَّهُۥ عَلِيمٌۢ بِذَاتِ ٱلصُّدُورِ ﴿٢٤﴾

25. ತನ್ನ ದಾಸರಿಂದ ಪಶ್ಚಾತ್ತಾಪ ಸ್ವೀಕರಿಸುವವನು ಮತ್ತು ಪಾಪಗಳನ್ನು ಕ್ಷಮಿಸುವವನು ಅವನೇ. ವಸ್ತುತಃ ನಿಮ್ಮ ಕರ್ಮಗಳ ಅರಿವು ಅವನಿಗಿದೆ.

وَهُوَ ٱلَّذِى يَقْبَلُ ٱلتَّوْبَةَ عَنْ عِبَادِهِۦ
وَيَعْفُوا۟ عَنِ ٱلسَّيِّـَٔاتِ وَيَعْلَمُ
مَا تَفْعَلُونَ ﴿٢٥﴾

26. ಅವನು ಸತ್ಯವಿಶ್ವಾಸಿಗಳ ಹಾಗೂ ಸತ್ಕರ್ಮಿಗಳ ಪ್ರಾರ್ಥನೆ ಸ್ವೀಕರಿಸುತ್ತಾನೆ ಮತ್ತು ಅವರಿಗೆ ತನ್ನ ಅನುಗ್ರಹದಿಂದ ಇನ್ನಷ್ಟು ಹೆಚ್ಚು ನೀಡುತ್ತಾನೆ. ಇನ್ನು ಸತ್ಯನಿಷೇಧಿಗಳ ವಿಷಯ, ಅವರಿಗಂತೂ ಘೋರ ಯಾತನೆ ಕಾದಿದೆ.

وَيَسْتَجِيبُ ٱلَّذِينَ ءَامَنُوا۟ وَعَمِلُوا۟
ٱلصَّٰلِحَٰتِ وَيَزِيدُهُم مِّن فَضْلِهِۦ ۚ
وَٱلْكَٰفِرُونَ لَهُمْ عَذَابٌ شَدِيدٌ ﴿٢٦﴾

27. ಅಲ್ಲಾಹನು ತನ್ನ ಎಲ್ಲ ದಾಸರಿಗೂ ವಿಶಾಲ ಜೀವನಾಧಾರ ಕೊಟ್ಟು ಬಿಡುತ್ತಿದ್ದರೆ, ಅವರು ಭೂಮಿಯಲ್ಲಿ ದಂಗೆ ಎದ್ದು ಬಿಡುತ್ತಿದ್ದರು. ಆದರೆ ಅವನು ಒಂದು ಪ್ರಮಾಣಕ್ಕನುಸಾರವಾಗಿ ತಾನಿಚ್ಛಿಸಿದಷ್ಟು ಇಳಿಸುತ್ತಾನೆ. ಖಂಡಿತವಾಗಿಯೂ ಅವನು ತನ್ನ ದಾಸರ ಬಗ್ಗೆ ತಿಳಿದಿರುವವನೂ ಅವರನ್ನು ನೋಡುತ್ತಿರುವವನೂ ಆಗಿರುವನು.

وَلَوْ بَسَطَ ٱللَّهُ ٱلرِّزْقَ لِعِبَادِهِۦ لَبَغَوْا۟
فِى ٱلْأَرْضِ وَلَٰكِن يُنَزِّلُ بِقَدَرٍ مَّا
يَشَآءُ ۚ إِنَّهُۥ بِعِبَادِهِۦ خَبِيرٌۢ بَصِيرٌ ﴿٢٧﴾

28. ಜನರು ನಿರಾಶರಾಗಿ ಬಿಟ್ಟ ಬಳಿಕ ಮಳೆಗರೆಯುವವನೂ ಮತ್ತು ತನ್ನ ಕೃಪೆಯನ್ನು ಹರಡುವವನೂ ಅವನೇ. ಪ್ರಶಂಸಾರ್ಹನಾದ ರಕ್ಷಕ ಮಿತ್ರನೂ ಅವನೇ.

وَهُوَ ٱلَّذِى يُنَزِّلُ ٱلْغَيْثَ مِنۢ بَعْدِ
مَا قَنَطُوا۟ وَيَنشُرُ رَحْمَتَهُۥ ۚ وَهُوَ
ٱلْوَلِىُّ ٱلْحَمِيدُ ﴿٢٨﴾

29. ಭೂಮಿ - ಆಕಾಶಗಳ ಸೃಷ್ಟಿಯೂ ಅವನು ಇವೆರಡರಲ್ಲಿ ಹರಡಿಸಿ ರುವ ಈ ಜೀವಿಗಳೂ ಅವನ ನಿದರ್ಶನಗಳಲ್ಲಾಗಿವೆ. ತಾನಿಚ್ಛಿಸಿದಾಗ ಅವನು ಅವುಗಳನ್ನು ಒಟ್ಟುಗೂಡಿಸಬಲ್ಲನು.

وَمِنْ ءَايَٰتِهِۦ خَلْقُ ٱلسَّمَٰوَٰتِ وَٱلْأَرْضِ
وَمَا بَثَّ فِيهِمَا مِن دَآبَّةٍ ۚ وَهُوَ عَلَىٰ
جَمْعِهِمْ إِذَا يَشَآءُ قَدِيرٌ ﴿٢٩﴾

الربع

30. ನಿಮಗೆ ಒದಗಿರುವ ಯಾವುದೇ ಸಂಕಷ್ಟವು ನಿಮ್ಮ ಕೈಗಳ ಗಳಿಕೆಯಿಂದಲೇ ಆಗಿದೆ.[11] ಅನೇಕ ಪಾಪಗಳನ್ನು ಅವನು ಹಾಗೆಯೇ ಕ್ಷಮಿಸಿ ಬಿಡುತ್ತಾನೆ.

وَمَآ أَصَٰبَكُم مِّن مُّصِيبَةٍ فَبِمَا كَسَبَتْ
أَيْدِيكُمْ وَيَعْفُوا۟ عَن كَثِيرٍ ﴿٣٠﴾

31. ನೀವು ಭೂಮಿಯಲ್ಲಿ ಅವನನ್ನು ಸೋಲಿಸಬಲ್ಲವರಲ್ಲ ಮತ್ತು

وَمَآ أَنتُم بِمُعْجِزِينَ فِى ٱلْأَرْضِ ۖ وَمَا

11. ಇದು ಆ ಕಾಲದಲ್ಲಿ ಮಕ್ಕಾದಲ್ಲಿ ಬಂದಿದ್ದ ಕ್ಷಾಮದ ಕಡೆಗಿರುವ ಸೂಚನೆ.

ನಿಮಗೆ ಅಲ್ಲಾಹನ ವಿರುದ್ಧ ಯಾವುದೇ ಬೆಂಬಲಿಗನಾಗಲಿ ಸಹಾಯಕನಾಗಲಿ ಇಲ್ಲ.

لَكُمْ مِّنْ دُوْنِ اللّٰهِ مِنْ وَّلِيٍّ وَّلَا نَصِيْرٍ ﴿٣١﴾

32. ಸಮುದ್ರದಲ್ಲಿ ಪರ್ವತಗಳಂತೆ ತೋರುತ್ತಿರುವ ಈ ಹಡಗುಗಳು ಅವನ ನಿದರ್ಶನಗಳಲ್ಲಾಗಿವೆ.

وَمِنْ اٰيٰتِهِ الْجَوَارِ فِي الْبَحْرِ كَالْاَعْلَامِ ﴿٣٢﴾

33. ಅಲ್ಲಾಹನು ತಾನಿಚ್ಛಿಸಿದಾಗ ಗಾಳಿಯನ್ನು ಸ್ತಬ್ಧಗೊಳಿಸಬಲ್ಲನು ಮತ್ತು ಆಗ ಇವುಗಳು ಸಮುದ್ರದ ಬೆನ್ನ ಮೇಲೆ ನಿಂತಲ್ಲೇ ನಿಂತು ಬಿಡುವವು. ಅತ್ಯಂತ ಸಹನಶೀಲ ಹಾಗೂ ಕೃತಜ್ಞನಿಗೆ ಇದರಲ್ಲಿ ದೊಡ್ಡ ನಿದರ್ಶನಗಳಿವೆ-

اِنْ يَّشَاْ يُسْكِنِ الرِّيْحَ فَيَظْلَلْنَ رَوَاكِدَ
عَلٰى ظَهْرِهٖ ؕ اِنَّ فِيْ ذٰلِكَ لَاٰيٰتٍ لِّكُلِّ
صَبَّارٍ شَكُوْرٍ ﴿٣٣﴾

34. ಅಥವಾ ಅವನು (ಆ ಹಡಗಿನಲ್ಲಿರುವ ಪ್ರಯಾಣಿಕರ) ಅನೇಕ ಪಾಪಗಳನ್ನು ಕ್ಷಮಿಸಿ ಅವರ ಕೆಲವೊಂದು ದುಷ್ಕೃತ್ಯಗಳ ಫಲವಾಗಿ ಅವರನ್ನು ಮುಳುಗಿಸಿ ಬಿಡಲೂಬಹುದು.

اَوْ يُوْبِقْهُنَّ بِمَا كَسَبُوْا وَيَعْفُ
عَنْ كَثِيْرٍ ﴿٣٤﴾

35. ಆಗ ನಮ್ಮ ನಿದರ್ಶನಗಳ ಕುರಿತು ಜಗಳಾಡುವವರಿಗೆ, ತಮಗೆಲ್ಲೂ ಅಭಯ ಸ್ಥಾನವಿಲ್ಲವೆಂದು ತಿಳಿದು ಬರುವುದು.

وَّيَعْلَمَ الَّذِيْنَ يُجَادِلُوْنَ فِيْٓ اٰيٰتِنَا ؕ
مَا لَهُمْ مِّنْ مَّحِيْصٍ ﴿٣٥﴾

36. ನಿಮಗೆ ನೀಡಲಾಗಿರುವುದೆಲ್ಲವೂ ಕೇವಲ ಇಹಲೋಕದ ಕೆಲವೇ ದಿನಗಳ ಜೀವನ ಸಾಧನಗಳಾಗಿವೆ ಮತ್ತು ಅಲ್ಲಾಹನ ಬಳಿಯಲ್ಲಿ ರುವುದೆಲ್ಲ ಉತ್ತಮವೂ ಶಾಶ್ವತವೂ ಆಗಿರುತ್ತದೆ. ಅದು ಇರುವುದು ಸತ್ಯವಿಶ್ವಾಸಿಗಳಿಗಾಗಿ ಮತ್ತು ತಮ್ಮ ಪ್ರಭುವಿನ ಮೇಲೆ ಭರವಸೆ ಇಡುವವರಿಗಾಗಿ.

فَمَآ اُوْتِيْتُمْ مِّنْ شَيْءٍ فَمَتَاعُ
الْحَيٰوةِ الدُّنْيَا ۚ وَمَا عِنْدَ اللّٰهِ خَيْرٌ
وَّاَبْقٰى لِلَّذِيْنَ اٰمَنُوْا وَعَلٰى رَبِّهِمْ
يَتَوَكَّلُوْنَ ﴿٣٦﴾

37. ಅವರು ದೊಡ್ಡ ದೊಡ್ಡ ಪಾಪಗಳಿಂದ ಮತ್ತು ಅಶ್ಲೀಲ ಕಾರ್ಯಗಳಿಂದ ದೂರವಿರುವವರೂ ಸಿಟ್ಟು ಬಂದಾಗ ಕ್ಷಮಿಸಿ ಬಿಡುವವರೂ ಆಗಿರುತ್ತಾರೆ.

وَالَّذِيْنَ يَجْتَنِبُوْنَ كَبٰٓئِرَ الْاِثْمِ
وَالْفَوَاحِشَ وَاِذَا مَا غَضِبُوْا هُمْ
يَغْفِرُوْنَ ﴿٣٧﴾

38. ಅವರು ತಮ್ಮ ಪ್ರಭುವಿನ ಆಜ್ಞೆಗಳನ್ನು ಪಾಲಿಸುತ್ತಾರೆ, ನಮಾಝನ್ನು ಸಂಸ್ಥಾಪಿಸುತ್ತಾರೆ, ತಮ್ಮ ವ್ಯವಹಾರಗಳನ್ನು ಪರಸ್ಪರ ಸಮಾಲೋಚನೆಯಿಂದ ನಡೆಸುತ್ತಾರೆ, ನಾವು ಅವರಿಗೆ ಕೊಟ್ಟಿರುವ ಜೀವನಾಧಾರಗಳಿಂದ ಖರ್ಚು ಮಾಡುತ್ತಾರೆ-

وَالَّذِيْنَ اسْتَجَابُوْا لِرَبِّهِمْ وَاَقَامُوا
الصَّلٰوةَ ۪ وَاَمْرُهُمْ شُوْرٰى بَيْنَهُمْ ۪
وَمِمَّا رَزَقْنٰهُمْ يُنْفِقُوْنَ ﴿٣٨﴾

39. ಮತ್ತು ಅವರ ಮೇಲೆ ಅತಿರೇಕವೆಸಗಲ್ಪಟ್ಟರೆ ಅದನ್ನು ಪ್ರತಿ ರೋಧಿಸುತ್ತಾರೆ.

وَالَّذِيْنَ اِذَآ اَصَابَهُمُ الْبَغْيُ هُمْ
يَنْتَصِرُوْنَ ﴿٣٩﴾

40. ಕೆಡುಕಿನ ಪ್ರತಿಫಲ[12] ಅದಕ್ಕೆ ಸಮಾನವಾದ ಕೆಡುಕಾಗಿದೆ. ಇನ್ನು ಯಾರಾದರೂ ಕ್ಷಮಿಸಿಬಿಟ್ಟರೆ ಹಾಗೂ ಸುಧಾರಿಸಿಕೊಂಡರೆ ಅದರ ಪ್ರತಿಫಲದ ಹೊಣೆ ಅಲ್ಲಾಹನ ಮೇಲಿದೆ. ನಿಶ್ಚಯವಾಗಿಯೂ ಅವನು ಅಕ್ರಮಿಗಳನ್ನು ಮೆಚ್ಚುವುದಿಲ್ಲ.

وَجَزٰٓؤُا سَيِّئَةٍ سَيِّئَةٌ مِّثْلُهَا ۚ فَمَنْ عَفَا وَاَصْلَحَ فَاَجْرُهٗ عَلَى اللّٰهِ ؕ اِنَّهٗ لَا يُحِبُّ الظّٰلِمِيْنَ ۝٤٠

41. ತಮ್ಮ ಮೇಲೆ ಅಕ್ರಮವಾದ ಬಳಿಕ ಪ್ರತೀಕಾರವೆಸಗಿದವರನ್ನು ಆಕ್ಷೇಪಿಸಲಾಗದು.

وَلَمَنِ انْتَصَرَ بَعْدَ ظُلْمِهٖ فَاُولٰٓئِكَ مَا عَلَيْهِمْ مِّنْ سَبِيْلٍ ۝٤١

42. ವಾಸ್ತವದಲ್ಲಿ ಇತರರ ಮೇಲೆ ಅಕ್ರಮವೆಸಗುವವರು ಮತ್ತು ಭೂಮಿಯಲ್ಲಿ ಅನ್ಯಾಯವಾಗಿ ಅತಿರೇಕವೆಸಗುವವರೇ ಆಕ್ಷೇಪಕ್ಕೆ ಅರ್ಹರು. ಇಂತಹವರಿಗೆ ವೇದನಾಯುಕ್ತ ಯಾತನೆ ಇದೆ.

اِنَّمَا السَّبِيْلُ عَلَى الَّذِيْنَ يَظْلِمُوْنَ النَّاسَ وَيَبْغُوْنَ فِى الْاَرْضِ بِغَيْرِ الْحَقِّ ؕ اُولٰٓئِكَ لَهُمْ عَذَابٌ اَلِيْمٌ ۝٤٢

43. ಆದರೆ ಯಾರಾದರೂ ಸಹನೆಯಿಂದ ವರ್ತಿಸಿದರೆ ಹಾಗೂ ಕ್ಷಮಿಸಿದರೆ ಇದೊಂದು ಮಹಾ ಸಾಹಸದ ಕಾರ್ಯಗಳಲ್ಲಾಗುವುದು.

وَلَمَنْ صَبَرَ وَغَفَرَ اِنَّ ذٰلِكَ لَمِنْ عَزْمِ الْاُمُوْرِ ۝٤٣

44. ಯಾರನ್ನು ಅಲ್ಲಾಹನೇ ಪಥಭ್ರಷ್ಟಗೊಳಿಸಿ ಬಿಡುವನೋ ಅವನನ್ನು ರಕ್ಷಿಸಬಲ್ಲವರು ಅಲ್ಲಾಹನ ಹೊರತು ಬೇರಾರೂ ಇಲ್ಲ. ಈ ಅಕ್ರಮಿಗಳು ಯಾತನೆಯನ್ನು ಕಂಡಾಗ, ಇನ್ನು ಮರಳಿ ಹೋಗಲು ದಾರಿಯೇನಾದರೂ ಇದೆಯೇ? ಎಂದು ಹೇಳುವುದನ್ನು ನೀವು ಕಾಣುವಿರಿ.

وَمَنْ يُّضْلِلِ اللّٰهُ فَمَا لَهٗ مِنْ وَّلِيٍّ مِّنْۢ بَعْدِهٖ ؕ وَتَرَى الظّٰلِمِيْنَ لَمَّا رَاَوُا الْعَذَابَ يَقُوْلُوْنَ هَلْ اِلٰى مَرَدٍّ مِّنْ سَبِيْلٍ ۝٤٤

45. ಇವರು ನರಕಾಗ್ನಿಯ ಮುಂದೆ ತರಲ್ಪಡುವಾಗ ಅವಮಾನಿತರಾಗಿ ತಲೆ ತಗ್ಗಿಸುತ್ತಿರುವುದನ್ನೂ ಅದನ್ನು ಕುಡಿನೋಟದೊಂದಿಗೆ ಕದ್ದು ನೋಡುವುದನ್ನೂ ನೀವು ಕಾಣುವಿರಿ. ಪುನರುತ್ಥಾನದ ಈ ದಿನ ತಮ್ಮನ್ನೂ ತಮ್ಮ ಸಂಬಂಧಿಕರನ್ನೂ ನಷ್ಟಕ್ಕೊಳಪಡಿಸಿಕೊಂಡವರೇ ನಿಜವಾದ ಹಾನಿಗೊಳಗಾದವರೆಂದು ಸತ್ಯವಿಶ್ವಾಸಿಗಳು ಆಗ ಹೇಳುವರು. ಎಚ್ಚರಿಕೆ! ಅಕ್ರಮಿಗಳು ಶಾಶ್ವತವಾದ ಯಾತನೆಯಲ್ಲಿರುವರು.

وَتَرٰىهُمْ يُعْرَضُوْنَ عَلَيْهَا خٰشِعِيْنَ مِنَ الذُّلِّ يَنْظُرُوْنَ مِنْ طَرْفٍ خَفِيٍّ ؕ وَقَالَ الَّذِيْنَ اٰمَنُوْٓا اِنَّ الْخٰسِرِيْنَ الَّذِيْنَ خَسِرُوْٓا اَنْفُسَهُمْ وَاَهْلِيْهِمْ يَوْمَ الْقِيٰمَةِ ؕ اَلَآ اِنَّ الظّٰلِمِيْنَ فِىْ عَذَابٍ مُّقِيْمٍ ۝٤٥

46. ಅಲ್ಲಾಹನಿಗೆದುರಾಗಿ ಅವರ ಸಹಾಯಕ್ಕೆ ಬರಬಲ್ಲ ಯಾವ ರಕ್ಷಕರೂ ಅವರಿಗಿರಲಾರರು. ಅಲ್ಲಾಹನೇ ಯಾರನ್ನು ಪಥಭ್ರಷ್ಟಗೊಳಿಸಿರುವನೋ ಅವನ ಪಾಲಿಗೆ ರಕ್ಷಣೆಯ ಯಾವ ಮಾರ್ಗವೂ ಇಲ್ಲ.

وَمَا كَانَ لَهُمْ مِّنْ اَوْلِيَآءَ يَنْصُرُوْنَهُمْ مِّنْ دُوْنِ اللّٰهِ ؕ وَمَنْ يُّضْلِلِ اللّٰهُ فَمَا لَهٗ مِنْ سَبِيْلٍ ۝٤٦

12. ಇಲ್ಲಿಂದ 43ನೆಯ ಸೂಕ್ತದ ಕೊನೆಯ ತನಕದ ವಚನಗಳು ಹಿಂದಿನ ಸೂಕ್ತದ ವಿವರಣೆಯಾಗಿದೆ.

47. ಯಾವ ದಿನದ ನಿವಾರಣೆಗೆ ಅಲ್ಲಾಹನು ಯಾವುದೇ ಅವಕಾಶವನ್ನಿಟ್ಟಿಲ್ಲವೋ ಆ ದಿನವು ಬರುವುದಕ್ಕೆ ಮುಂಚೆ ನಿಮ್ಮ ಪ್ರಭುವಿನ ಕರೆಗೆ 'ಓ'ಗೊಡಿರಿ. ಅಂದು ನಿಮಗಾಗಿ ಯಾವುದೇ ಅಭಯಸ್ಥಾನ ಇರಲಾರದು-

اسْتَجِيبُوا لِرَبِّكُم مِّن قَبْلِ أَن يَأْتِيَ
يَوْمٌ لَّا مَرَدَّ لَهُ مِنَ اللَّهِ ۚ مَا لَكُم
مِّن مَّلْجَإٍ يَوْمَئِذٍ وَمَا لَكُم مِّن نَّكِيرٍ ﴿٤٧﴾

48. ಮತ್ತು ನಿಮ್ಮ ಅವಸ್ಥೆಯನ್ನು ಬದಲಾಯಿಸಲು ಯತ್ನಿಸುವವನೂ ಯಾರೂ ಇರಲಾರನು.[13] ಹೀಗಿದ್ದೂ ಇವರು ವಿಮುಖರಾದರೆ ಸಂದೇಶವಾಹಕರೇ, ನಾವು ನಿಮ್ಮನ್ನು ಇವರ ಕಾವಲುಗಾರನಾಗಿಯಂತು ಕಳುಹಿಸಿಲ್ಲ. ನಿಮ್ಮ ಮೇಲಂತೂ ವಿಷಯವನ್ನು ತಲುಪಿಸಿ ಬಿಡುವ ಹೊಣೆಗಾರಿಕೆ ಮಾತ್ರ ಇದೆ. ಮಾನವನ ಅವಸ್ಥೆಯೇನೆಂದರೆ, ನಾವು ಅವನಿಗೆ ನಮ್ಮ ಕೃಪೆಯ ಸವಿಯನ್ನು ಉಣಿಸಿದಾಗ ಅವನು ಅದರಿಂದ ಉಬ್ಬಿಕೊಳ್ಳುತ್ತಾನೆ. ಆದರೆ ಅವನು ಸ್ವತಃ ಮಾಡಿದ ಕರ್ಮಗಳ ಯಾವುದಾದರೂ ಫಲವು ಸಂಕಷ್ಟದ ರೂಪದಲ್ಲಿ ಅವನ ಮೇಲೆ ಎರಗಿ ಬಿಟ್ಟಾಗ ಅವನು ಮಹಾ ಕೃತಘ್ನನಾಗಿ ಬಿಡುತ್ತಾನೆ.

فَإِنْ أَعْرَضُوا فَمَا أَرْسَلْنَاكَ عَلَيْهِمْ
حَفِيظًا ۖ إِنْ عَلَيْكَ إِلَّا الْبَلَاغُ ۗ وَإِنَّا
إِذَا أَذَقْنَا الْإِنسَانَ مِنَّا رَحْمَةً فَرِحَ
بِهَا ۖ وَإِن تُصِبْهُمْ سَيِّئَةٌ بِمَا قَدَّمَتْ
أَيْدِيهِمْ فَإِنَّ الْإِنسَانَ كَفُورٌ ﴿٤٨﴾

49. ಅಲ್ಲಾಹನು ಭೂಮಿ-ಆಕಾಶಗಳ ಪ್ರಭುತ್ವದ ಒಡೆಯನು. ತಾನಿಚ್ಛಿಸಿದ್ದನ್ನು ಅವನು ಸೃಷ್ಟಿಸುತ್ತಾನೆ, ತಾನಿಚ್ಛಿಸಿದವರಿಗೆ ಹೆಣ್ಣು ಮಕ್ಕಳನ್ನು ಕೊಡುತ್ತಾನೆ, ತಾನಿಚ್ಛಿಸಿದವರಿಗೆ ಗಂಡು ಮಕ್ಕಳನ್ನು ಕೊಡುತ್ತಾನೆ,

لِّلَّهِ مُلْكُ السَّمَاوَاتِ وَالْأَرْضِ ۚ يَخْلُقُ
مَا يَشَاءُ ۚ يَهَبُ لِمَن يَشَاءُ إِنَاثًا
وَيَهَبُ لِمَن يَشَاءُ الذُّكُورَ ﴿٤٩﴾

50. ತಾನಿಚ್ಛಿಸಿದವರಿಗೆ ಗಂಡು-ಹೆಣ್ಣುಗಳೆರಡನ್ನೂ ಸೇರಿಸಿ ಕೊಡುತ್ತಾನೆ, ತಾನಿಚ್ಛಿಸಿದವರನ್ನು ಬಂಜೆಯಾಗಿ ಮಾಡುತ್ತಾನೆ. ಅವನು ಸರ್ವಜ್ಞನೂ ಸರ್ವ ಸಮರ್ಥನೂ ಆಗಿರುತ್ತಾನೆ.

أَوْ يُزَوِّجُهُمْ ذُكْرَانًا وَإِنَاثًا ۖ وَ
يَجْعَلُ مَن يَشَاءُ عَقِيمًا ۚ إِنَّهُ
عَلِيمٌ قَدِيرٌ ﴿٥٠﴾

51. ಯಾವ ದಾಸನೂ ಅಲ್ಲಾಹನು ಅವನ ಜೊತೆ ಮುಖಾಮುಖಿ ಮಾತನಾಡುವಷ್ಟು ಸ್ಥಾನಮಾನವುಳ್ಳವನಲ್ಲ. ಅವನ ಮಾತು 'ವಹ್ಯ್'ನ (ಸೂಚನೆ) ರೂಪದಲ್ಲಿರುತ್ತದೆ[14] ಅಥವಾ ತೆರೆಯಮರೆಯಿಂದಾಗಿರುತ್ತದೆ[15] ಅಥವಾ ಅವನು ಯಾರಾದರೂ ದೂತ

وَمَا كَانَ لِبَشَرٍ أَن يُكَلِّمَهُ اللَّهُ إِلَّا
وَحْيًا أَوْ مِن وَرَاءِ حِجَابٍ أَوْ يُرْسِلَ
رَسُولًا فَيُوحِيَ بِإِذْنِهِ مَا يَشَاءُ ۚ إِنَّهُ

13. ಮೂಲದಲ್ಲಿ 'ಮಾಲಕುಮ್ ಮಿನ್ನಕೀರ್' ಎಂಬ ಪದ ಪ್ರಯೋಗವಾಗಿದೆ. ಈ ಉದ್ಧರಣೆಗೆ ಇತರ ಅನೇಕ ವಿವರಣೆಗಳಿರಲು ಸಾಧ್ಯವಿದೆ. ಮೊದಲನೆಯದಾಗಿ ನೀವು ನಿಮ್ಮ ಕೃತ್ಯಗಳ ಪೈಕಿ ಯಾವುದನ್ನೂ ನಿರಾಕರಿಸಲಾರಿರಿ. ಎರಡನೆಯದಾಗಿ ನೀವು ವೇಷ ಬದಲಿಸಿಕೊಂಡು ಎಲ್ಲೂ ಅಡಗಲಾರಿರಿ. ಮೂರನೆಯದಾಗಿ ನಿಮ್ಮೊಡನೆ ಮಾಡಲಾಗುವ ಯಾವುದೇ ವರ್ತನೆಗೆ ನೀವು ಪ್ರತಿಭಟನೆ ಅಥವಾ ಅಸಮಾಧಾನ ವ್ಯಕ್ತಪಡಿಸಲಾರಿರಿ. ನಾಲ್ಕನೆಯದಾಗಿ ಯಾವ ಪರಿಸ್ಥಿತಿಯಲ್ಲಿ ನಿಮ್ಮನ್ನು ಸಿಲುಕಿಸಲಾಗಿದೆಯೋ ಅದನ್ನು ನೀವು ಬದಲಿಸಲಾರಿರಿ.

14. ಇಲ್ಲಿ 'ವಹ್ಯ್'ಯೆಂದರೆ ದಿವ್ಯಜ್ಞಾನ, ಜ್ಞಾನೋದಯ, ಮನಸ್ಸಿನಲ್ಲಿ ವಿಷಯ ಹೊಳೆಯುವಂತೆ ಮಾಡುವುದು, ಹ. ಇಬ್‌ರಾಹೀಮ್ ಮತ್ತು ಹ. ಯೂಸುಫ್‌ರಿಗೆ(ಅ) ತೋರಿಸಲಾದಂತೆ ಕನಸಿನಲ್ಲಿ ಯಾವುದನ್ನಾದರೂ ತೋರಿಸುವುದು ಇತ್ಯಾದಿಗಳಾಗಿವೆ.

15. ಅರ್ಥಾತ್- ದಾಸ ಒಂದು ಶಬ್ದ ಕೇಳುತ್ತಾನೆ. ಆದರೆ ಹೇಳುವವರು ಅವನಿಗೆ ಗೋಚರಿಸುವುದಿಲ್ಲ. ಮೂಸಾರಿಗೆ(ಅ) ಹೀಗೆಯೇ ತೂರ್

عَلِيٌّ حَكِيْمٌ ﴿٥١﴾

(ದೇವಚರ)ನನ್ನು ಕಳುಹಿಸುತ್ತಾನೆ ಮತ್ತು ಆ ದೂತನು ಅವನ ಆದೇಶದಂತೆ ಅವನು ಬಯಸಿದ್ದನ್ನು 'ವಹ್ಯ್' ಮಾಡುತ್ತಾನೆ.[16] ಅವನು ಮಹೋನ್ನತನೂ ಮಹಾಯುಕ್ತಿವಂತನೂ ಆಗಿರುತ್ತಾನೆ-

وَكَذٰلِكَ اَوْحَيْنَآ اِلَيْكَ رُوْحًا مِّنْ
اَمْرِنَا ؕ مَا كُنْتَ تَدْرِىْ مَا الْكِتٰبُ
وَلَا الْاِيْمَانُ وَلٰكِنْ جَعَلْنٰهُ نُوْرًا
نَّهْدِىْ بِهٖ مَنْ نَّشَآءُ مِنْ عِبَادِنَا ؕ وَ
اِنَّكَ لَتَهْدِىْۤ اِلٰى صِرَاطٍ مُّسْتَقِيْمٍ ﴿٥٢﴾

52. ಮತ್ತು ಇದೇ ರೀತಿಯಲ್ಲಿ (ಸಂದೇಶವಾಹಕರೇ) ನಾವು ನಮ್ಮ ಅಪ್ಪಣೆಯಿಂದ ಒಂದು 'ರೂಹ'ನ್ನು ನಿಮ್ಮ ಕಡೆಗೆ ವಹ್ಯ್ ಮಾಡಿರುತ್ತೇವೆ.[17] ಗ್ರಂಥವೆಂದರೆ ಏನೆಂದೂ ಸತ್ಯವಿಶ್ವಾಸ ಎಂದರೆ ಏನೆಂದೂ ನಿಮಗೆ ಗೊತ್ತಿರಲಿಲ್ಲ. ಆದರೆ ಆ 'ರೂಹ'ನ್ನು ನಾವು ಒಂದು ಪ್ರಕಾಶವಾಗಿ ಮಾಡಿದೆವು. ಆ ಮೂಲಕ ನಾವು ನಮ್ಮ ದಾಸರ ಪೈಕಿ ನಾವಿಚ್ಛಿಸುವವರಿಗೆ ದಾರಿ ತೋರಿಸುತ್ತೇವೆ. ನಿಸ್ಸಂದೇಹವಾಗಿಯೂ ನೀವು ನೇರ ಮಾರ್ಗದ ಕಡೆಗೆ ಮಾರ್ಗ ದರ್ಶನ ಮಾಡಿಸುತ್ತಿರುವಿರಿ-

صِرَاطِ اللّٰهِ الَّذِىْ لَهٗ مَا فِى السَّمٰوٰتِ
وَمَا فِى الْاَرْضِ ؕ اَلَآ اِلَى اللّٰهِ
تَصِيْرُ الْاُمُوْرُ ﴿٥٣﴾

53. ಭೂಮಿ-ಆಕಾಶಗಳಲ್ಲಿರುವ ಪ್ರತಿಯೊಂದು ವಸ್ತುವಿನ ಒಡೆಯನಾಗಿ ರುವ ಅಲ್ಲಾಹನ ಮಾರ್ಗದೆಡೆಗೆ. ಎಚ್ಚರಿಕೆ! ಎಲ್ಲ ವಿಷಯಗಳೂ ಕೊನೆಗೆ ಅಲ್ಲಾಹನೆಡೆಗೇ ಮರಳುತ್ತವೆ.

ಪರ್ವತದ ತಪ್ಪಲಿನಲ್ಲಿ ಇದ್ದಕ್ಕಿದ್ದಂತೆ ಒಂದು ಶಬ್ದ ಕೇಳಿಸಿತು. ಆದರೆ ಹೇಳುವವನು ಅವರ ದೃಷ್ಟಿಯಿಂದ ಮರೆಯಾಗಿದ್ದನು.

16. ಇದು ಎಲ್ಲಾ ದಿವ್ಯಗ್ರಂಥಗಳನ್ನು ಪ್ರವಾದಿಗಳಿಗೆ ತಲಪಿಸಲಾದಂತಹ 'ವಹ್ಯ್'ಯ ಪ್ರಕಾರವಾಗಿದೆ.

17. ಇದೇ ರೀತಿಯಲ್ಲಿ ಎಂದರೆ ಕೊನೆಯ ವಿಧಾನದಂತೆ ಎಂದಲ್ಲ. ಬದಲಾಗಿ ಮೇಲಿನ ಸೂಕ್ತದಲ್ಲಿ ಪ್ರಸ್ತಾಪಿಸಲಾಗಿರುವ ಮೂರೂ ವಿಧಾನದಂತೆ ಎಂದಾಗಿದೆ. 'ರೂಹ್' ಎಂದರೆ 'ದಿವ್ಯವಾಣಿ' ಅಥವಾ ದಿವ್ಯವಾಣಿಯ ಮೂಲಕ ಪ್ರವಾದಿವರ್ಯರಿಗೆ(ಸ) ನೀಡಲಾದ ಬೋಧನೆ.